# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**
ನೊಂದಣಿ ಸಂಖ್ಯೆ :

## ಪಿಎಸ್‌ಐ ಪತ್ರಿಕೆ – 1

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಪ್ರಶ್ನೆಗಳು**

**ಅಂಕಗಳು : 100**

ಹೆಸರು :

ಮೊಬೈಲ್ ನಂ :

**12-12-2021**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ 600 ಪದಗಳು ಮೀರದಂತೆ ಪ್ರಬಂಧವನ್ನು ಬರೆಯಿರಿ.**

ಅಥವಾ

1. ಕೃಷಿಯ ಮೇಲೆ ಆಧುನಿಕ ತಂತ್ರಜ್ಞಾನದ ಪ್ರಭಾವ

**Impact of Modern Technology on Farming**

ಅಥವಾ

2. ನಮ್ಮ ಜೀವನದಲ್ಲಿ ಕಂಪ್ಯೂಟರ್‌ಗಳ ಪ್ರಾಮುಖ್ಯತೆ

**Importance of Computers in our life**

ಅಥವಾ

3. ವಿಶ್ವ ಆರ್ಥಿಕತೆಯ ಮೇಲೆ ಕೋವಿಡ್–19 ಪ್ರಭಾವ

**Impact of Covid-19 on the world economy**

ಅಥವಾ

4. ಹೆಣ್ಣು ಭ್ರೂಣಹತ್ಯೆ – ಸಂಸ್ಕೃತಿಯ ಕಳಂಕ

**Female Foetidice Aculturalblemish**

ಅಥವಾ

5. ಇಂದು ದೇಶದಲ್ಲಿ ನ್ಯಾಯಾಂಗದ ಪಾತ್ರ

**Role of Judiciary in the country today**

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಹಲವಾರು ಬಲಶಾಲಿ ರಾಜಕಾರಣಿಗಳು ಭಾರತವನ್ನು ಈಗಾಗಲೇ ಸಾಮರಸ್ಯದಿಂದ ಒಂದಾಗಿ ಬೆಸೆಯಲ್ಪಟ್ಟಿರುವ ಒಂದು ರಾಷ್ಟ್ರವೆಂದೂ, ಇಲ್ಲವೇ ಕೆಲವು ಇಚ್ಛಿಸಿದ ಮಾತ್ರಕ್ಕೆ ಆ ರೀತಿ ರಾಷ್ಟ್ರವನ್ನು ಬೆಸೆಯಬಹುದೆಂದು ತಪ್ಪಾಗಿ ಕಲ್ಪಿಸಿಕೊಂಡಿದ್ದಾರೆ ಈಸದುದ್ಧೇಶ ಪೂರಿತವಾದ ಅದರೆ ವಿಚಾರಹೀನರಾದ ನಮ್ಮೀ ಮಿತ್ರರು ತಮ್ಮ ಕನಸುಗಳನ್ನೇ ವಸ್ತುಸ್ಥಿತಿ ಎಂದು ನಂಬುತ್ತಾರೆ ಎಂದೇ ಅವರು ಜಾತೀಯ ಸಂಸ್ಥೆಗಳೇ ಜಾತೀಯ ತಿಕ್ಕಾಟಗಳಲ್ಲಿ ಕಾರಣವೆಂದು ಆರೋಪಿಸುತ್ತದೆ. ಆದರೆ ಇಂಥಹ ತಥಾಕಥಿತ ಜಾತೀಯ ಪ್ರಶ್ನೆಗಳೆಲ್ಲವೂ ಶತಮಾನಗಳಷ್ಟು ತಲೆತಲಾಂತರದಿಂದ ನಮಗೆ ಬಂದಿರುವಂತಹ ವಾರಸಿಕೆ ಹಿಂದೂಗಳಲ್ಲಿ ಮತ್ತು ಮುಸಲ್ಮಾನರಲ್ಲಿ ಸಾಂಸ್ಕೃತಿಕ, ಮತೀಯ, ರಾಷ್ಟ್ರೀಯ ರಂಗಗಳಲ್ಲಿ ಸಂಭವಿಸಿದ ವಿದ್ವೇಷದಿಂದ ಹುಟ್ಟಿ ಬಂದಂತಹವು ಅವು ಸಮಯ ಪಕ್ವವಾದಾಗ ಮಾತ್ರ ಅವುಗಳನ್ನು ಪರಿಹರಿಸಲಾದೀತು. ಅವುಗಳ ಅಸ್ತಿತ್ವವನ್ನು ಗುಣಪಡಿಸುವುದು ಸರಿಯೇ ಹೊರತು ಅದನ್ನು ಅಲಕ್ಷಿಸಲಾಗದು ದು:ಖಕಾರಕವಾದ ಈ ತಥ್ಯಗಳನ್ನು ಧ್ಯರ್ಯದಿಂದ ಎದುರಿಸೋಣ.

ಭಾರತವನ್ನು ಒಂದು ಏಕಾತ್ಮವಾದ ಸಾಮರಸ್ಯಪೂರ್ಣವಾದ ರಾಷ್ಟ್ರವೆಂದು ಪರಿಗಣಿಸುವುದು ಅಸಾಧ್ಯ ಇಂದು ನಮ್ಮೀ ದೇಶದಲ್ಲಿ ಒಂದರ ಬದಲಾಗಿ ಮುಖ್ಯವಾಗಿ ಎರಡು ರಾಷ್ಟ್ರಗಳಿವೆ; ಅವೆಂದರೆ ಹಿಂದೂ ಮತ್ತು ಮುಸ್ಲಿಂ ವಂದೇಮಾತರಂ ಗೀತೆಗೆ ಮುಸಲ್ಮಾನರ ವಿರೋಧವನ್ನು ಪ್ರಸ್ತಾಪಿಸುತ್ತಾ ಸಾವರಕರರು, ವಿವಿಧ ಸಂಸ್ಕೃತಿ, ಬುಡಕಟ್ಟು ಮತ್ತು ರಾಷ್ಟ್ರಗಳ ನಡುವಣ ಸಂಘರ್ಷ ಇದು. ಇಂತಹವು ಮುಸಲ್ಮಾನರ ಮನಸ್ಸಲ್ಲಿ ನೆಟ್ಟು ದೃಢವಾಗಿರುವ ರೋಗದ ಹೊರೆ ಚಿಹ್ನೆಗಳು ಅಷ್ಟೆ" ॥ ಎಂದಿದ್ದರು ಸಾವರಕರರು ಭಾಷಣವು ಪತ್ರಿಕೆಗಳಲ್ಲಿ ಪ್ರಕಟವಾದಾಗ ಎಲ್ಲ ಪ್ರಕಾರ ರಾಷ್ಟ್ರವಾದಿಗಳ ಹೃದಯವೂ ತಲ್ಲಣಗೊಂಡಿತು. ಹಿಂದೂ ರಾಷ್ಟ್ರೀಯತ್ವವೇ ಭಾರತದಲ್ಲಿನ ಏಕಮಾತ್ರ ನೈಜ ರಾಷ್ಟ್ರೀಯತೆಯೆಂದು ಎತ್ತಿ ಒತ್ತಿ ಘೋಷಿಸುವುದರಲ್ಲಿ ಯಾರು ಎಂದೂ ಹೆಜ್ಜೆ ಹಿಂದಿಟ್ಟಿರಲಿಲ್ಲವೋ, ಅಂತಹ ರಾಷ್ಟ್ರೀಯತ್ವದ ಪ್ರಭಾವಿ ಸಮರ್ಥಕರ ಬಾಯಿಂದ ಇಂತಹ ಮಾತು ಹೊರಬಂದೀತೆಂದು ಯಾರೂ ಕನಸುಮನಸಿನಲ್ಲಿಯೂ ಎಣಿಸಿರಲ್ಲಿಲ್ಲ.

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

**Organic farming system in India is not new and is being followed from ancient time it is a method of farming system which primarily aimed at cultivating the land and raising crops in such a way as to keep the soil alive and in good health by use of organic wastes (crop, animal and farm wastes) aquatic wastes and other biological materials along with beneficial microbes (bio fertilizers ) to release nutrients to corps for increased sustainable production in an eco friendly pollution free environment as per the definition of the united states department of agriculture (USDA) study team on organic farming Organic farming is a system which avoids or largely excludes the use of synthetic inputs (such as fertilizers pesticides hormones feed additives etc and to the maximum extent feasible rely upon crop rotation crop residues animal manures off-farm Organic wastes mineral grade rock additives and biological system of nutrient mobilization and plant protection FAO suggested that organic agriculture is a unique production management system which promotes and enhances agro ecosystem health including biodiversity biological cycles and soil biological activity and this is accomplished by using on -farm agronomic biological and mechanical methods in exclusion of all synthetic off-farm inputs**

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

ಈ ಜಗತ್ತು ಬಿಟ್ಟು ನಮ್ಮ ಜೀವನವಿಲ್ಲ. ಜಗತ್ತು ಬೆಳೆದರೆ ನಾವು ಬೆಳೆಯುತ್ತೇವೆ ನಾವು ಬೆಳೆದರೆ ಜಗತ್ತು ಬೆಳೆಯುತ್ತದೆ ಈ ಜಗತ್ತಿನೊಂದಿಗೆಯೇ ನಾವು ಬಾಳಿ–ಬೆಳೆಯಬೇಕು. ಈ ಜಗತ್ತಿನಲ್ಲಿರುವ ಪಶು–ಪಕ್ಷಿ, ಜನ–ಮನ, ಸಕಲ ಜೀವರಾಶಿಯ ಕಲ್ಯಾಣ ನಾವು ಬಯಸಬೇಕು. ಅದು ನಮ್ಮ ಕಲ್ಯಾಣ ಬಯಸಬೇಕು ಇದುವೆ ಧರ್ಮಜೀವನ ಆ ಕುರಿತು ಗೀತೆಯಲ್ಲಿ ಒಂದು ಸುಂದರ ಶ್ಲೋಕ  ದೇವರನ್ನು ಸಂತೋಷ ಪಡಿಸಿರಿ.ಪರಸ್ಪರರನ್ನು ತೃಪ್ತಿಪಡಿಸಿ ಪರಮಶ್ರೇಯಸ್ಸನ್ನು ಪಡೆಯಿರಿ. ನಾವು ಇತರರಿಗೆ ಒಳ್ಳೆಯದನ್ನು ಬಯಸಬೇಕು. ಇತರರು ನಮಗೆ ಒಳ್ಳೆಯದನ್ನು ಬಯಸಬೇಕು. ಹೀಗೆ ಪರಸ್ಪರ ಪ್ರೀತಿಯಿಂದಿರುವುದು, ಒಬ್ಬರಿಗೊಬ್ಬರು ಒಳ್ಳೆಯದನ್ನು ಮಾಡವುದೇ ನಿಜ ಧರ್ಮ.

ಫ್ರಾನ್ಸ್‌ದೇಶಗಳಲ್ಲಿ ಒಬ್ಬ ದನಕಾಯುವ ಮನುಷ್ಯ, ಪರಿಸರ ಪ್ರೇಮಿ. ಅರಣ್ಯಕ್ಕೆ ಹೋಗುವಾಗ ಕೈಯಲ್ಲಿ ಗುದ್ದಲಿ, ಸಲಿಕೆ ಕೆಲವು ಸಸಿಗಳನ್ನು ಒಯ್ಯುತಿದ್ದ. ದನಗಳ ಕಾಯುತ್ತಲೇ ಪ್ರತಿ ದಿನವೂ ಸಸಿಗಳನ್ನು ನೆಡುತ್ತಿದ್ದ. ಹತ್ತಾರು ವರುಷಗಳಲ್ಲಿ ಅರಣ್ಯಕ್ಕೆ ಅರಣ್ಯವೇ ನಂದನವನವಾಗಿತ್ತು 'ಇದು ಸರಕಾರಿ ಜಮೀನು ನೀನೇಕೆ ಮರಗಳನ್ನು ಬೇಳೆಸಿದೆ ?' ಎಂದು ಫ್ರಾನ್ಸ್ ದೇಶದ ಸರಕಾರಿ ಕೇಳಿತು. ಆ ದನಗಾಯಿ ಹೇಳಿದ, ಈ ಮರಗಳಲ್ಲಿ ನಾನು ಬೆಳೆಸಿದ್ದು ದೇಶಕ್ಕಾಗಿಯೇ, ವಿನಾ, ನನಗಾಗಿ ಅಲ್ಲ, ಈ ಮಾತನ್ನು ಕೇಳಿದ ಫ್ರಾನ್ಸ್ ದೇಶದ ಸರಕಾರಕ್ಕೆ ಆಶ್ಚರ್ಯ ! ಇಂದಿಗೂ ಫ್ರಾನ್ಸ್ ದೇಶವು ಆ ದನಗಾಯಿಯನ್ನು 'ಮರದ ಮಿತ್ರ' ಎಂದು ಕೃತಜ್ಞತೆಯಿಂದ ನೆನೆಯುತ್ತದೆ.

ಸತ್ಕಾರ್ಯಗಳನ್ನು ಮಾಡವ ಮೂಲಕ ನಾವು ಈ ಜಗತ್ತಿಗೆ ದೈವೀಶಕ್ತಿಯನ್ನು ಇಳಿಸಬೇಕು' ಅದರಿಂದ ನಮ್ಮ ಜೀವನವು ದಿವ್ಯ ಜೀವನವಾಗುತ್ತದೆ ಎಂದು ಮಹರ್ಷಿ ಅರವಿಂದರು ಎನ್ನುತ್ತಾರೆ. ಅವರು ನಾವು ಬದುಕಿರುವ ಈ ಜಗತ್ತೆಲ್ಲವೂ ದೈವೀಮಯವಾಗಿದೆ ಎಂದರು ಅಕ್ಕಮಹಾದೇವಿತವರು ತಮ್ಮ ಒಂದು ವಚನದಲ್ಲಿ ಹೇಳಿದ್ದಾರೆ ವನವೆಲ್ಲ ನೀವೆ ವನದೊಳಗಣ ದೇವತರುವೆಲ್ಲ ನೀವೆ ತರುವಿನೊಳಗಾಡುವ ಖಗಮೃಗದೇವೋಭವ,  ಪಿತೃದೇವೋಭವ ಅತಿಥಿ ದೇವೋಭವ, ಆಚಾರ್ಯದೇವೋ ಭವ ಎಂದು ನಮ್ಮ ಋಷಿಮುನಿಗಳು ತಾಯಿ–ತಂದೆ, ಗುರು–ಹಿರಿಯರು, ಅತಿಥಿ ಅಭಾಗ್ಯತರು ಎಲ್ಲರಲ್ಲಿ ದೇವರನ್ನು ಕಂಡರು,ಕಂಡರಸಿದರು .

ವಿದ್ಯಾಕಾಶಿ ಕರಿಯರ್ ಅಕಾಡೆಮಿ